ದಿನಾಂಕ 18.06.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ ಶ್ರೀ ಜಿ.ಬಿ.ಹೆಚ್. ವಕೀಲರಿಂದಃ**

ಜಡೇಪೆದ್ದಭೋವಿಯ ಮಕ್ಕಳು ವಿಭಾಗವಾಗಿರುವ ಬಗ್ಗೆ ದಾಖಲೆ ಇದೆಯೇ ಎಂದರೆ ಅದು ಮೌಖಿಕ ವಿಭಾಗ ಎನ್ನುತ್ತಾರೆ. ವಿಭಾಗದ ಪ್ರಕಾರ ಖಾತೆ ಪಹಣಿ ಬದಲಾವಣೆ ಆಗಿದೆ. ಸದರಿ ದಾಖಲೆಗಳನ್ನು ನೋಡಿರುತ್ತೇನೆ. ಈ ರೀತಿ ಖಾತೆ ಬದಲಾವಣೆ ನಾನು ಹುಟ್ಟುವ ಪೂರ್ವದಲ್ಲಿಯೇ ಆಗಿದೆ. ಚಿಕ್ಕಯಲ್ಲಮ್ಮನ ಕುಟುಂಬದ ವ್ಯವಹಾರಗಳನ್ನು ಆಕೆಯ ಗಂಡ ಈರಯ್ಯ ನೋಡಿಕೊಳ್ಳುತ್ತಿದ್ದರು. ಸದರಿ ಈರಯ್ಯನವರು ದಾವಾ ಆಸ್ತಿಗಳ ವಿಚಾರ ಚೆನ್ನಾಗಿ ತಿಳಿದಿದೆ. ಸದರಿಯವರು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಚಿಕ್ಕಯಲ್ಲಮ್ಮನವರು ವಿದ್ಯಾವಂತರು ಎಂದರೆ ಬಹಳ ಕಡಿಮೆ ಓದಿದ್ದಾರೆ. ವ್ಯವಹಾರ ಜ್ಞಾನ ಹೊಂದಿದ್ದಾರೆ. ಚಿಕ್ಕಯಲ್ಲಮ್ಮ ತನಗೆ ಸೇರಿದ ಆಸ್ತಿಗಳ ದಾಖಲಾತಿಗಳನ್ನು ಅಷ್ಟಾಗಿ ನೋಡಿಕೊಂಡಿಲ್ಲ. ಚಿಕ್ಕಯಲ್ಲಮ್ಮನ ತಾಯಿ ಪದ್ದಕ್ಕನಹಳ್ಳಿಯಲ್ಲಿ ವಾಸವಿದ್ದರು. ದಾವಾ ಆಸ್ತಿಯು ದಾಖಲೆ ಚಿಕ್ಕಯಲ್ಲಮ್ಮನ ತಾಯಿ ಯಲ್ಲಮ್ಮ ತನ್ನ ಹೆಸರಿಗೆ ಮಾಡಿಕೊಂಡಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾವತಿಸಿದ ಕಂದಾಯದ ರಶೀದಿಗಳು ಇದೆಯೇ ಎಂದರೆ ಕಂದಾಯ ಕಟ್ಟಲಾಗಿದೆ ಆದರೆ ರಶೀದಿ ಇಲ್ಲ, ಕಳೆದು ಹೋಗಿರಬಹುದು. ಈ ಕುರಿತು ಕಂದಾಯ ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ದಾವಾ ಆಸ್ತಿಗಳು ಮಾರಾಟ ಆಗಿರುವ ವಿಚಾರ ನಮಗೆ ೨೦೧೫ ನೇ ಸಾಲಿನಲ್ಲಿ ತಿಳಿಯಿತು. ಕ್ರಯಪತ್ರದ ಪ್ರತಿಗಳನ್ನು ಪಡೆದಿರುತ್ತೇನೆ. ದಾವಾ ಐಟಂ ೧ ನ್ನು ದಿ:೨೧.೦೫.೨೦೦೧ ರಂದು ಪೆದ್ದಭೋವಿ ಮಾರಾಟ ಮಾಡಿದ್ದಾರೆ. ದಾವಾ ಐಟಂ ೨ ನ್ನು ದಿ:೦೭.೧೧.೧೯೮೩ ರಂದು ಪೆದ್ದಭೋವಿ ಮತ್ತು ಆತನ ಮಕ್ಕಳು ಮಾರಾಟ ಮಾಡಿದ್ದಾರೆ. ದಾವಾ ಐಟಂ ೩ ನ್ನು ದಿ:೧೧.೧೨.೨೦೦೩ ರಂದು ಕೆ.ಪಿ.ರಾಜಣ್ಣ ಮತ್ತು ಆತನ ಮಕ್ಕಳು ಮಾರಾಟ ಮಾಡಿದ್ದಾರೆ. ಜಮೀನುಗಳು ಖರೀದಿಸಿದವರ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ಕ್ರಯವನ್ನು ಪ್ರಶ್ನೆ ಮಾಡಿಲ್ಲ ಎಂದರೆ ವಿಷಯ ತಿಳಿದ ನಂತರ ಪ್ರಶ್ನೆ ಮಾಡಿದ್ದೇವೆ. ಮಾರಾಟ ಮಾಡಿರುವ ವಿಷಯ ಹೇಗೆ ತಿಳಿಯಿತು ಎಂದರೆ ಆಸ್ತಿಗಳನ್ನು ಅಭಿವೃದ್ಧಿ ಮಾಡಲು ಬ್ಯಾಂಕ್ ಸಾಲ ಪಡೆಯುವ ಸಲುವಾಗಿ ಖಾತೆ, ಪಹಣಿ ಪಡೆದು ಪರಿಶೀಲಿಸಿದಾಗ ತಿಳಿಯಿತು.

ನನ್ನ ತಂದೆಗೆ ಸೇರಿದ ಆಸ್ತಿಗಳ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇದೆ. ಸದರಿ ಜಮೀನುಗಳಿಗೆ ಕಾಲ ಕಾಲಕ್ಕೆ ಕಂದಾಯ ಕಟ್ಟಿ ಅಭಿವೃದ್ಧಿ ಮಾಡಲಾಗಿದೆ ಎಂದರೆ ನನ್ನ ತಂದೆಯವರೇ ಮಾಡಿದ್ದಾರೆ. ಈ ರೀತಿ ನನ್ನ ತಂದೆ ಸುಮಾರು ೩೦-೪೦ ವರ್ಷಗಳಿಂದ ಅವರು ಬದುಕಿರುವವರೆಗೂ ಮಾಡಿದ್ದಾರೆ. ಕೆಂಗಪೆದ್ದಭೋವಿಯ ಮಗನ ಹೆಸರು ಕೆ.ಪೆದ್ದಭೋವಿ ಎಂದರೆ ಸರಿಯಲ್ಲ. ಕೆಂಗಪೆದ್ದಭೋವಿಗೆ ಯಾವುದೇ ಹೆಣ್ಣು ಮಗಳು ಇರಲಿಲ್ಲ ಎಂದರೆ ಪೆದ್ದಕ್ಕ ಎನ್ನುವ ಹೆಣ್ಣು ಮಗಳು ಇದ್ದಳು. ದಾವಾ ಜಮೀನನ್ನು ಲಪಟಾಯಿಸ ಬೇಕೆಂಬ ಉದ್ದೇಶದಿಂದ

ಕೆಂಗಪೆದ್ದಭೋವಿಗೆ ಪೆದ್ದಕ್ಕ ಎಂಬ ಹೆಸರಿನ ಹೆಣ್ಣು ಮಗಳು ಇದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಖ್ಯೆ: ೧ ರಿಂದ ೫ ಇವರು ಕೆ. ಪೆದ್ದಭೋವಿಯ ವಂಶಸ್ಥರು ಎಂದರೆ ಮೊಮ್ಮಕ್ಕಳು ಎನ್ನುತ್ತಾರೆ. ೧ನೇ ಪ್ರತಿವಾದಿ ಮತ್ತು ಆತನ ಅಣ್ಣ ರಾಜಣ್ಣ ಇವರು ಕೆ.ಪೆದ್ದಭೋವಿಯ ಮಕ್ಕಳು ಎಂದರೆ ಸರಿ. ಕೆಂಗಪೆದ್ದಭೋವಿ ಮರಣ ನಂತರ ಆಸ್ತಿಯ ಖಾತೆಗಳನ್ನು ಕೆ.ಪೆದ್ದಭೋವಿ ಹೆಸರಿಗೆ ವರ್ಗಾಯಿಸಲಾಗಿದೆ ಎಂದರೆ ಅವರು ಮಾಡಿಕೊಂಡಿದ್ದಾರೆ. ಅಂದಿನಿಂದ ಈಗಲೂ ಸಹ ಖಾತೆ ಅವರ ಹೆಸರಿನಲ್ಲಿ ಇದೆ ಎಂದರೆ ಸರಿ. ಖಾತೆ ಬದಲಾವಣೆ ನಂತರ ಅವರೇ ಅನುಭವ ಮಾಡುತ್ತ ಅನೇಕ ಜನರಿಗೆ ಮಾರಾಟ ಮಾಡಿದ್ದಾರೆ ಎಂದರೆ ನಾವು ಅನುಭವ ಮಾಡುತ್ತಿದ್ದೇವು, ಅವರು ಮಾರಾಟ ಮಾಡಿದ್ದಾರೆ. ನಾವು ಜಮೀನು ಸಾಗುವಳಿ ಮಾಡಿದ್ದನ್ನು ತೋರಿಸಲು ದಾಖಲೆ ಇಲ್ಲ. ಕ್ರಯದಾರರು ಸ್ವಾಧೀನದಲ್ಲಿರುವ ನಾವು ೨೦೧೫ ನೇ ಸಾಲಿನಲ್ಲಿ ನೋಡಿಕೊಂಡು ತಕರಾರು ಮಾಡಿದ್ದೇವೆ. ಕ್ರಯದ ಸಮಯದಿಂದಲೂ ಖರೀದಿದಾರರೇ ಸ್ವಾಧೀನ ಹೊಂದಿದ್ದರು ಸಹ ೨೦೧೫ ರಲ್ಲಿ ನಮಗೆ ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕೆ.ಪೆದ್ದಭೋವಿಯ ಮಕ್ಕಳು ೧ನೇ ಪ್ರತಿವಾದಿ ಮತ್ತು ರಾಜಣ್ಣ, ಈತನ ಮರಣಾ ನಂತರ ಆತನ ಹೆಂಡತಿ-ಮಕ್ಕಳು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

ರಾಜರಾಜೇಶ್ವರಿ ದೇವಸ್ಥಾನ ಕಟ್ಟುವ ಕಾಲಕ್ಕೆ ನಾನು ಯಾವುದೇ ತಂಟೆ ತಕರಾರು ಮಾಡಿಲ್ಲ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ಸಾರ್ವಜನಿಕರು ಸಹ ಬರುತ್ತಾರೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ರಾಜಣ್ಣನ ಮಕ್ಕಳು ಮಾತ್ರ ಅರ್ಚಕರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾನು ಸಹ ಪೂಜೆ ಮಾಡುತ್ತಿದ್ದೇನೆ. ನಾನು ಯಾವತ್ತೂ ಸದರಿ ದೇವಸ್ಥಾನದ ಪೂಜಾರಿಕೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬೆಲೆ ಈಗ ಬಹಳ ಹೆಚ್ಚಾಗಿದೆ ಎಂದರೆ ಸರಿ. ದಾವಾ ಆಸ್ತಿಗಳ ಬೆಲೆ ಹೆಚ್ಚಾದ ಕಾರಣ ಹೇಗಾದರೂ ಮಾಡಿ ಲಪಟಾಯಿಸ ಬೇಕೆಂಬ ಉದ್ದೇಶದಿಂದ ಸುಳ್ಳು ವಂಶವೃಕ್ಷ ಸೃಷ್ಟಿ ಮಾಡಿ, ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಯಾವುದೇ ರೀತಿಯ ಹಕ್ಕು, ಸ್ವಾಧೀನ, ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿರುವ ಪರಿಹಾರಗಳಿಗೆ ಅರ್ಹರಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ನೀಡಿರುವ ಹೆಸರು, ವಿಳಾಸ ಸರಿಯಾಗಿದೆ. ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯರ ಹೆಸರು ಇದೆ ಎಂದರೆ ಅವರು ಮಾಡಿಕೊಂಡಿದ್ದಾರೆ. ಗ್ರಾಮಲೆಕ್ಕಿಗರು ಸಾಗುವಳಿದಾರರ ಹೆಸರಿಗೆ ಪಹಣಿ ಪತ್ರಿಕೆ ಬರೆಯುತ್ತಾರೆ ಎಂದರೆ ಸರಿ.

ನಿ.ಪಿ.೨೫ ನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ಕೆಂಗಪೆದ್ದಭೋವಿಯನ್ನು ನೋಡಿಲ್ಲ, ಕೆ.ಪೆದ್ದಭೋವಿಯನ್ನು ನೋಡಿದ್ದೇನೆ. ನಿ.ಪಿ.೨೫ ರಲ್ಲಿ ಕೆಂಗಪೆದ್ದಭೋವಿಯ ಮಗಳು ಪೆದ್ದಕ್ಕ ಎಂದು ತೋರಿಸಿರುವುದು ಹಾಗೂ ಇತರೆ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ನಿ.ಪಿ.೨೫ ನ್ನು ದಾವೆಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವೆಗೆ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

ನಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ದಾಖಲೆಯನ್ನು ಸೃಷ್ಟಿ ಮಾಡಿ, ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.